ಮಾರ್ನಿಂಗ್, ಗುಡ್ ಈವ್ನಿಂಗ್, ಹ್ಯಾಪಿ ಮೆಂಟಲ್ ಡೇ, ಹ್ಯಾಪಿ ಡೆಂಟಲ್ ಡೇಗಳಂತಹ ಕಸಗಳನ್ನು ಅಳತೆಮೀರಿ ತುಂಬಿಕೊಂಡು ಹ್ಯಾಂಗಾಗುವ ಮೊಬೈಲ್‌ಗಳನ್ನು ನಿಮಿಷಮಾತ್ರದಲ್ಲಿ ಗುಡಿಸಿ, ಸದಾ ಶುಚಿಯಾಗಿ ಇಟ್ಟು ಕ್ಲೀನ್ ಮಾಸ್ಟರ್‌ನಂತೆ ಪೊರೆಯವ ಪೊರಕೆ ಎಂಬ ಆ್ಯಪಿನ ಅಗತ್ಯ ಇಲ್ಲ ಅನ್ನುವವರು ಇದ್ದಾರೆಯೇ?

ಈಗ ಎಲ್ಲಾ ದೇಶಗಳೂ ನಾ ಮುಂದು ತಾ ಮುಂದು, ನನ್ನದೊಂದಿರಲಿ ಜೊತೆಗಿನ್ನೊಂದಿರಲಿ, ಎಂದು ಕೃತಕ ಉಪಗ್ರಹಗಳನ್ನು ಉಡಾಯಿಸಿ ಉಡಾಯಿಸಿ ಅಂತರಿಕ್ಷವನ್ನೂ ನಮ್ಮ ರಿಕ್ಷಾ ಸ್ಟ್ಯಾಂಡ್‌ಗಳಂತೆ ಮಾಡಿರುವುದು ಗೊತ್ತಿರುವ ಸಂಗತಿಯೇ. ಕೆಲಸ ನಿಲ್ಲಿಸಿ ಕಸವಾದ ಉಪಗ್ರಹಗಳನ್ನು ನಿವಾರಿಸಿಕೊಳ್ಳುವ ಸ್ಪೇಸ್ ಬ್ರೂಮ್ ಎಂಬ, ಧೂಮಕೇತುವಿನಾಕಾರದ (ಕಸಬರಿಗೆಯನು ಹೋಲುವ) ಉಪಗ್ರಹವನ್ನು ನಾಸಾ ಇಸ್ರೋಗಳು ಯಾಕೆ ಉಡಾಯಿಸಬಾರದು? ಇದೇನೋ ಸರಿ, ಆದರೆ ಸ್ಪೇಸ್‌ನ ಕಸವನ್ನು ಎತ್ತಿ ಎಸೆಯೋದು ಎಲ್ಲಿಗೆ? ಇರಲಿ, ಇದೆಲ್ಲ ದೊಡ್ಡವರ ವಲಯದಲ್ಲಿ ಚರ್ಚೆಯಾಗಬೇಕಾದ ವಿಷಯಗಳು.



'ಲಾಂಗೂಲ ಚವರಿಯಿಂದಂಬರದರಿಲ್ಗಳಂ
ಗುಡಿಸಿ ಪಾತಾಳಕುದುರಿಸುವಾರ್ಪು
ನನಗಣುಗಲಾಲೀಲೆ'

(ಬಾಲದ ಚವರಿಯಿಂದ ಬಾನಂಗಳವನ್ನೇ ಗುಡಿಸಿ, ನಕ್ಷತ್ರಕಸಗಳನು ಒಗ್ಗೂಡಿಸಿ ಪಾತಾಳಲೋಕಕ್ಕೆ ತಳ್ಳಿಬಿಡುತ್ತೇನೆ) ಅಂತರಿಕ್ಷ ಕಸದ ವಿಷಯ ಬಂದಾಗ ಕುವೆಂಪು ಅವರ ಹನುಮಂತ ಹೇಳುವ ಈ ಮೇಲಿನ ಸಾಲುಗಳು ನೆನಪಿಗೆ ಬರುತ್ತದೆ. ಆತ ಲಂಕೆಗೆ ಹಾರುವ ಮುನ್ನ ತನ್ನ ಬಳಗದವರಿಗೆ ಆತ್ಮವಿಶ್ವಾಸದಿಂದ ನೀಡಿದ ಆಶ್ವಾಸನೆಯ ಮಾತುಗಳಿವು. ಲಾಂಗೂಲ ಚವರಿಯೇ ಕಸಬರಿಗೆಯಾಗಿ, ನಕ್ಷತ್ರಗಳೇ ಕಸವಾಗಿ, ಪಾತಾಳಲೋಕವೇ ಕಸದಬುಟ್ಟಿಯಾದ ಅತ್ಯದ್ಭುತ ಕಲ್ಪನೆ ಇಲ್ಲಿದೆ.

'ಅಂಗಳವನು ನೀರಿನಿಂ ಗುಡಿ ಗುಡಿಸಿ ದೋಸೆಯ ಎರೆಯುತಿರ್ಪರ್' ಕಂತಿ ಹಂಪರ ಸಮಸ್ಯೆಯಂತೆ ಇರುವ ಇದನ್ನು ಬಿಡಿಸಿಕೊಡಿ ಎಂದು ಯಾರೋ ವಾಟ್ಸ್‌ಆ್ಯಪ್ ಮಾಡಿದ್ದರು. ನನ್ನ ಹಾಸ್ಟೆಲ್ ದಿನಗಳ ಚಿತ್ರ ಕಣ್ಣ ಮುಂದೆ ತೇಲಿ ಬಂದು ಇದಕ್ಕೊಂದು ಪರಿಹಾರವನ್ನು ಕೊಟ್ಟಿತು. ಹಾಸ್ಟೆಲ್ಲಿನಲ್ಲಿ ದೋಸೆಯ ದಿನದಂದು ನಾವು ಎಷ್ಟು ಬೇಗ ಎದ್ದರೂ ಕ್ಯೂ ನಿಲ್ಲಲೇಬೇಕಾಗುತ್ತಿತ್ತು. ಆಗ ಅಡಿಗೆಯವರು ನೀರು ಹಾಕಿ ಕಾವಲಿಗೆಯನ್ನು ಕಡ್ಡಿಹಿಡಿಯಿಂದ ಬಳಿದು ದೋಸೆ ಎರೆಯುವ ಚಂದವನ್ನು ಕಣ್ ತುಂಬಿಕೊಳ್ಳುವ ಭಾಗ್ಯ ನಮ್ಮದಾಗುತ್ತಿತ್ತು. ಮತ್ತೆ ಪುನಃ ಕಡ್ಡಿಹಿಡಿಯನ್ನು ತುಪ್ಪವೆಂಬ ಹೆಸರಿನ ದ್ರವಕ್ಕೆ ಅದ್ದಿ ದೋಸೆಯ ಮೇಲೆ ಸಿಂಪಡಿಸುವುದು, ಪುರೋಹಿತರು ದಿವ್ಯಜಲವನ್ನು ಮಾವಿನೆಲೆಯಿಂದ ಪ್ರೋಕ್ಷಣೆ ಮಾಡಿದಂತೆ ನೋಡಲು ಖುಷಿಕೊಡುತ್ತಿತ್ತು. 'ಕಾವಲಿಗೆಯ ಕಾದಂಗಳವನು ನೀರಿನಿಂ ಗುಡಿ ಗುಡಿಸಿ ದೋಸೆಯ